**ಸಿಸಿ ನಂ.181/2025** **ಪಿ.ಡಬ್ಲ್ಯೂ -1**

ದಿನಾಂಕ 04-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

1. ನಮ್ಮ ಮದುವೆ ಸಾಮೂಹಿಕ ವಿವಾಹದಲ್ಲಿ ಆಗಿತ್ತು. ಸಾಮೂಹಿಕ ವಿವಾಹದಲ್ಲಿ ಮದುವೆಯಾದರೆ ವರೋಪಚಾರ ಕೊಡಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೊಟ್ಟಿರುತ್ತೇವೆ ಎನ್ನುತ್ತಾರೆ. ಏನು ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ವರದಕ್ಷಿಣೆ ರೂ.50,000/-, 2 ತೊಲೆ ಬಂಗಾರ ಕೊಟ್ಟಿದ್ದೆವು ಎನ್ನುತ್ತಾರೆ. ಬಂಗಾರದ ರಶೀದಿಗಳನ್ನು ನಾವು ಕೊಟ್ಟಿರುವುದಿಲ್ಲ.

2. ದೂರನ್ನು ನಾನು & ನನ್ನ ಅಣ್ಣ ಹೋಗಿ ಕೊಟ್ಟಿರುತ್ತೇವೆ. ದೂರನ್ನು ತುರುವಿಹಾಳ್ ಪೋ.ಠಾ.ಯಲ್ಲಿ ಪೋಲೀಸರು ನಾನು ಹೇಳಿದಂತೆ ಗಣಕೀಕರಿಸಿದ್ದರು. ಪೋಲೀಸರಿಗೆ ನಾನು ಹಣ, ಬಂಗಾರ, ಮನೆ ಬಳಕೆ ಸಾಮಾನುಗಳನ್ನು ಕೊಟ್ಟ ಬಗ್ಗೆ ಹೇಳಿದ್ದೆ.

3. ನಾನು ತವರು ಮನೆಯಲ್ಲಿರಲು ಪ್ರಾರಂಭಿಸಿ 10 ವರ್ಷಗಳು ಕಳೆದಿವೆ. ನನ್ನ ತವರುಮನೆಯಿಂದ ಗಂಡನ ಮನೆಯ ಅಂತರ 130 ಕಿ.ಮೀ.

4. ನನ್ನ ವಿದ್ಯಾಭ್ಯಾಸ ದ್ವಿತಿಯ ಪಿಯುಸಿ.

**ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಸಿಂಧನೂರು.**